ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 12-11-1992.

# *ಭವಿಷ್ಯ ವಿಶ್ವರಾಜ್ಯದ ಆಧಾರ - ಸಂಗಮಯುಗದ ಸ್ವರಾಜ್ಯ*

(भविष्य विश्व-राज्य का आधार-संगमयुग का स्वराज्य)

***ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.***

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ವಿಶ್ವ ರಚಯಿತ ಬಾಪ್‌ದಾದಾ ತನ್ನ ಸ್ವರಾಜ್ಯಾಧಿಕಾರಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ವಿಶ್ವರಚಯಿತ ಬಾಪ್‌ದಾದಾರವರು ತನ್ನ ಸರ್ವ ಸ್ವರಾಜ್ಯ ಅಧಿಕಾರಿ ಮಕ್ಕಳನ್ನು ನೋಡುತ್ತಿದ್ದಾರೆ. ವರ್ತಮಾನ ಸಂಗಮಯುಗದ ಸ್ವರಾಜ್ಯಾಧಿಕಾರಿಗಳು ಮತ್ತು ಭವಿಷ್ಯದಲ್ಲಿ ವಿಶ್ವ ರಾಜ್ಯಾಧಿಕಾರಿ ಆಗುತ್ತೀರಿ ಏಕೆಂದರೆ ಸ್ವರಾಜ್ಯದಿಂದಲೇ ವಿಶ್ವ ರಾಜ್ಯದ ಅಧಿಕಾರ ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಈ ಸಮಯದ ಸ್ವರಾಜ್ಯದ ಪ್ರಾಪ್ತಿಯ ಅನುಭವ, ಭವಿಷ್ಯ ವಿಶ್ವರಾಜ್ಯಕ್ಕಿಂತಲೂ ಅತಿ ಶ್ರೇಷ್ಠ ಅನುಭವ ಮಾಡುತ್ತೀರಿ. ಇಡೀ ನಾಟಕದಲ್ಲಿ ರಾಜ್ಯಾಧಿಕಾರಿ ರಾಜ್ಯ ಮಾಡುತ್ತಾ ಬಂದಿದ್ದಾರೆ. ಮೊದಲು ಎಲ್ಲದಕ್ಕಿಂತ ಶ್ರೇಷ್ಠವಾದದು ಸ್ವರಾಜ್ಯವಾಗಿದೆ. ಇದರ ಆಧಾರದ ಮೇಲೆ ತಾವು ಸ್ವರಾಜ್ಯಾಧಿಕಾರಿ ಆತ್ಮರು ಅನೇಕ ಜನ್ಮಗಳು ಸತ್ಯ-ತ್ರೇತಾಯುಗದವರೆಗೂ ವಿಶ್ವರಾಜ್ಯಾಧಿಕಾರಿಯಾಗುತ್ತೀರಿ. ಅಂದಾಗ ಮೊದಲು ಸ್ವರಾಜ್ಯ. ನಂತರ ಅರ್ಧಕಲ್ಪದಲ್ಲಿ ವಿಶ್ವರಾಜ್ಯಾಧಿಕಾರ ಮತ್ತು ದ್ವಾಪರದಿಂದ ಹಿಡಿದು ರಾಜ್ಯವಂತೂ ಇದ್ದೇ ಇರುತ್ತದೆ

ಆದರೆ ವಿಶ್ವರಾಜ್ಯ ಇರುವುದಿಲ್ಲ. ರಾಜ್ಯದ ರಾಜರಾಗುತ್ತೀರಿ. ಇಡೀ ವಿಶ್ವದಲ್ಲಿ ಒಂದೇ ರಾಜ್ಯ. ಇದು ಕೇವಲ ಸತ್ಯಯುಗದಲ್ಲಷ್ಟೇ ಇರುತ್ತದೆ. ಅಂದಾಗ ಮೂರು ಪ್ರಕಾರದ ರಾಜ್ಯ ಅರ್ಥಾತ್ ಸರ್ವ ಅಧಿಕಾರದ ಪ್ರಾಪ್ತಿ ಸತ್ಯಯುಗ-ತ್ರೇತಾದ ರಾಜನೀತಿ, ದ್ವಾಪರದ ರಾಜನೀತಿ ಹಾಗೂ ಸಂಗಮಯುಗದ ಸ್ವರಾಜ್ಯ ನೀತಿ - ಮೂರನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದೀರಲ್ಲವೇ?

ಸಂಗಮಯುಗದ ರಾಜನೀತಿ ಅರ್ಥಾತ್ ಪ್ರತಿಯೊಬ್ಬ ಬ್ರಾಹ್ಮಣಾತ್ಮ ಸ್ವಯಂನ ರಾಜ್ಯಾಧಿಕಾರಿಯಾಗುತ್ತಾರೆ. ಪ್ರತಿಯೊಬ್ಬರೂ ರಾಜಯೋಗಿಗಳು. ಎಲ್ಲರೂ ರಾಜಯೋಗಿಗಳೋ ಅಥವಾ ಪ್ರಜಾಯೋಗಿಗಳೋ? ರಾಜಯೋಗಿ ಎಂದರೆ ರಾಜರಾಗುವ ಯೋಗಿಗಳು. ಹೇಗೆ ರಾಜಾ ತನ್ನ ಸೇವೆಯ ಜೊತೆಗಾರರು, ಪ್ರಜೆಗಳನ್ನು ಯಾವ ರೀತಿ ಆದೇಶದ ಪ್ರಮಾಣ, ರಾಜನೀತಿಯ ಪ್ರಮಾಣ ನಡೆಸುತ್ತಾರೆಯೋ ಅದೇ ನೀತಿಯ ಪ್ರಮಾಣ ಜೊತೆಗಾರರು & ಪ್ರಜೆಗಳು ಕಾರ್ಯವನ್ನು ಮಾಡುತ್ತಾರೆ. ಅದೇ ರೀತಿಯಾಗಿ ಸ್ವರಾಜ್ಯಾಧಿಕಾರಿ ಆತ್ಮರಾದ ನೀವು ನಿಮ್ಮ ಯೋಗ ಶಕ್ತಿಯಿಂದ ಪ್ರತಿಯೊಂದು ಕರಮೇಂದ್ರಿಯವನ್ನು ಹೇಗೆ ಅಜ್ಞಾಪಿಸಿದರೆ ಹಾಗೆ ಆದೇಶದ ಪ್ರಕಾರ ಪ್ರತಿಯೊಂದು ಕರ್ಮೇಂದ್ರಿಯ ನಡೆಯುತ್ತದೆ. ಕೇವಲ ಸ್ಥೂಲ ಶರೀರದ ಕರ್ಮೇಂದ್ರಿಯಗಳೇ ಅಲ್ಲ ಆದರೆ ಮನಸ್ಸು, ಬುದ್ಧಿ. ಸಂಸ್ಕಾರವೂ ಸಹ ತಾವು ರಾಜ್ಯಾಧಿಕಾರಿ ಆತ್ಮರ ಆದೇಶದ ಪ್ರಮಾಣ ನಡೆಯುತ್ತವೆ. ಹೇಗೆ ಬೇಕೋ ಯಾವಾಗ ಬೇಕೋ ಹಾಗೆಯೇ - ಮನಸ್ಸು ಅರ್ಥಾತ್ ಸಂಕಲ್ಪ ಶಕ್ತಿಯನ್ನು ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಸ್ಥಿತ ಮಾಡಲು ಸಾಧ್ಯವಾಗುತ್ತಿದೆಯೇ? ಅರ್ಥಾತ್ ಮನಸ್ಸು, ಬುದ್ಧಿ, ಸಂಸ್ಕಾರಕ್ಕೂ ಸಹ ರಾಜ್ಯಾಧಿಕಾರಿಗಳು. ಸಂಸ್ಕಾರಕ್ಕೆ ವಶ ಆಗುವುದಿಲ್ಲ. ಆದರೆ ಸಂಸ್ಕಾರವನ್ನು ತಮ್ಮ ವಶದಲ್ಲಿ ತಂದು ಶ್ರೇಷ್ಠ ನೀತಿಯಿಂದ ಕಾರ್ಯದಲ್ಲಿ ತೊಡಗಿಸುತ್ತಾರೆ. ಶ್ರೇಷ್ಠ ಸಂಸ್ಕಾರದ ಪ್ರಮಾಣ ಸಂಬಂಧ-ಸಂಪರ್ಕದಲ್ಲಿ ಬರುತ್ತೀರಿ ಅಂದಾಗ ಸ್ವರಾಜ್ಯ ನೀತಿಯಾಗಿದೆ - ಮನ, ಬುದ್ಧಿ, ಸಂಸ್ಕಾರ ಮತ್ತು ಸರ್ವ ಕರ್ಮೇಂದ್ರಿಯಗಳ ಮೇಲೆ ಸ್ವ ಅರ್ಥಾತ್ ಆತ್ಮನ ಅಧಿಕಾರ ಇರುವುದು, ಒಂದುವೇಳೆ ಯಾವುದೇ ಕರ್ಮೇಂದ್ರಿಯ ಕೆಲವೊಮ್ಮೆ ಕಣ್ಣು ಮೋಸ ಮಾಡುತ್ತದೆ. ಕೆಲವೊಮ್ಮೆ ಮಾತು ಮೋಸ ಮಾಡುತ್ತದೆ. ವಾಣಿ ಅರ್ಥಾತ್ ಬಾಯಿ ಮೋಸ ಮಾಡುತ್ತದೆ, ಸಂಸ್ಕಾರ ತನ್ನ ವಶದಲ್ಲಿ ಇರುವುದಿಲ್ಲ - ಅಂದಾಗ ಅವರಿಗೆ ಸ್ವರಾಜ್ಯಾಧಿಕಾರಿ ಎಂದು ಹೇಳಲಾಗುವುದಿಲ್ಲ. ಅವರನ್ನು ಸ್ವರಾಜ್ಯಾಧಿಕಾರಿಯ ಪುರುಷಾರ್ಥಿ ಎಂದು ಹೇಳಲಾಗುತ್ತದೆ. ಅಧಿಕಾರಿಗಳಲ್ಲ ಆದರೆ ಪುರುಷಾರ್ಥಿಗಳು. ವಾಸ್ತವದಲ್ಲಿ ರಾಜ್ಯಾಧಿಕಾರಿ ಆತ್ಮನಿಗೆ ಸ್ವಪ್ನದಲ್ಲಿಯೂ ಸಹ ಯಾವುದೇ ಕರ್ಮೇಂದ್ರಿಯ ಅಥವಾ ಮನಸ್ಸು-ಬುದ್ಧಿ-ಸಂಸ್ಕಾರ ಮೋಸ ಮಾಡಲು ಸಾಧ್ಯವಿಲ್ಲ ಏಕೆಂದರೆ ಅಧಿಕಾರಿಗಳು ಎಂದೂ ಸಹ ಅಧೀನರಾಗಲು ಸಾಧ್ಯವಿಲ್ಲ. ಅಧೀನರಾದರೆ ಅಧಿಕಾರಿ ಆಗುವ ಪುರುಷಾರ್ಥಿಗಳು ತಮ್ಮನ್ನು ತಾವು ಕೇಳಿಕೊಳ್ಳಿ ನಾವು ಪುರುಷಾರ್ಥಿಗಳೋ ಅಥವಾ ಅಧಿಕಾರಿಗಳೋ? ಅಧಿಕಾರಿಗಳು ಆಗಿದ್ದೀರೋ ಅಥವಾ ಆಗಬೇಕೋ? ಸ್ವರಾಜ್ಯದ ಆತ್ಮಿಕ ನಶೆ ಯಾವ ಅನುಭವವನ್ನು ಮಾಡಿಸುತ್ತದೆ? ನಿಶ್ಚಿಂತ ಚಕ್ರವರ್ತಿಗಳೋ, ದುಃಖರಹಿತ ಪ್ರಪಂಚದ ಚಕ್ರವರ್ತಿಗಳೋ, ಏನಾಗುತ್ತೀರಿ?

ಎಲ್ಲದಕ್ಕಿಂತ ಉನ್ನತವಾದ ಚಕ್ರವರ್ತಿ ನಿಶ್ಚಿಂತ ಚಕ್ರವರ್ತಿ ಮತ್ತು ಎಲ್ಲದಕ್ಕಿಂತ ದೊಡ್ಡ ರಾಜ್ಯ ದುಃಖರಹಿತ ರಾಜ್ಯ. ನಿಶ್ಚಿಂತ ರಾಜ್ಯಾಧಿಕಾರಿಗಳ ಮುಂದೆ ಈ ವಿಶ್ವದ ರಾಜ್ಯ ಏನೂ ಇಲ್ಲ. ಈ ದುಃಖರಹಿತ ರಾಜ್ಯಾಧಿಕಾರ ಅತೀ ಶ್ರೇಷ್ಠ ಮತ್ತು ಸುಖಮಯವಾಗಿದೆ. ದುಃಖ ಇಲ್ಲದೇ ಇರುವುದು. ಆದ್ದರಿಂದ ದುಃಖರಹಿತವಾದ ಅನುಭವ ಆಗುತ್ತಿದೆಯಲ್ಲವೇ. ಕೆಲವೊಮ್ಮೆ ಕೆಳಗೆ ಬಂದುಬಿಡುತ್ತೀರಾ? ಸದಾ ಆತ್ಮೀಯ ನಶೆಯಲ್ಲಿ ನಿಶ್ಚಿಂತ ಚಕ್ರವರ್ತಿಗಳು- ಈ ಅಧಿಕಾರದಲ್ಲಿ ಇರಿ. ಕೆಳಗಡೆ ಬರಬೇಡಿ. ನೋಡಿ, ಇವತ್ತಿನ ರಾಜ್ಯದಲ್ಲಿಯೂ ಸಹ ಒಂದುವೇಳೆ ಯಾರಾದರೂ ಕುರ್ಚಿಯ ಮೇಲಿರುತ್ತಾರೆಂದರೆ ಅವರದು ಅಧಿಕಾರವಿರುತ್ತದೆ. ನಾಳೆ ಇಳಿದು ಬಿಡುತ್ತಾರೆಂದರೆ ಅವರಿಗೆ ಅಧಿಕಾರವಿರುತ್ತದೆಯೇ? ಸಾಧಾರಣರಾಗಿಬಿಡುತ್ತಾರೆ. ತಾವೂ ಸಹ ಸ್ವರಾಜ್ಯದ ನಶೆಯಲ್ಲಿ ಇರುತ್ತೀರಾ? ಅಕಾಲ ಸಿಂಹಾಸನಾಧಿಕಾರಿಗಳು ಆಗಿರುತ್ತೀರಾ? ಎಲ್ಲರ ಬಳಿ ಸಿಂಹಾಸನವಿದೆಯಲ್ಲವೇ. ಸಿಂಹಾಸನವನ್ನು ಏಕೆ ಬಿಟ್ಟುಬಿಡುತ್ತೀರಿ? ಸದಾ ಸಿಂಹಾಸನಾಧಿಕಾರಿಗಳಾಗಿ, ಆತ್ಮಿಕ ನಶೆಯಲ್ಲಿ ಇರಿ. ಅಕಾಲ ಸಿಂಹಾಸನವೆಂದರೆ - ಆ ಅಮೃತಸರ್‌ದಲ್ಲಿರುವ ಅಕಾಲ ಸಿಂಹಾನವಲ್ಲ. ಈ ಅಕಾಲ ಸಿಂಹಾಸನ ಎಲ್ಲರ ಬಳಿ ಇದೆ. ಅಕಾಲ ಸಿಂಹಾಸನಾಧಿಕಾರಿ ಸ್ವರಾಜ್ಯಾಧಿಕಾರಿಯನ್ನಾಗಿ ಯಾರು ಮಾಡಿದರು? ತಂದೆ ಪ್ರತಿಯೊಬ್ಬ ಬ್ರಾಹ್ಮಣ ಮಗುವಿಗೆ ಸಿಂಹಾಸನಾಧಿಕಾರಿ ರಾಜನನ್ನಾಗಿ ಮಾಡಿದ್ದಾರೆ.

ಇಡೀ ಸೃಷ್ಟಿ ಚಕ್ರದ ಒಳಗೆ ತನ್ನ ಎಲ್ಲಾ ಮಕ್ಕಳನ್ನು ರಾಜರಾಗಿಸಿರುವ ತಂದೆ ಯಾರಾದರೂ ಇದ್ದಾರೆಯೇ? ಲಕ್ಷ್ಮೀ-ನಾರಾಯಣಗೂ ಸಹ ಈ ರೀತಿ ಇರಲು ಸಾಧ್ಯವಿಲ್ಲ. ನನ್ನ ಎಲ್ಲಾ ಮಕ್ಕಳು ರಾಜಾ ಮಕ್ಕಳಾಗಿದ್ದಾರೆಂದು ಪರಮಾತ್ಮ ತಂದೆ ತಿಳಿಸುತ್ತಾರೆ. ಆದರೆ ಪ್ರಪಂಚದಲ್ಲಿ ತನ್ನ ಮಕ್ಕಳನ್ನು ರಾಜಾ ಮಕ್ಕಳೆಂದು ಹೇಳುತ್ತಾರೆ ಆದರೆ ಅವರು ಏನಾದರೂ ಆಗಲಿ, ಸರ್ವೆಂಟ್ ಆಗಲಿ ಅಥವಾ ಏನೇ ಆಗಲಿ ಹೇಳುವುದಕ್ಕೆ ರಾಜಾ ಮಗು ಎಂದು ಹೇಳುತ್ತಾರೆ ಆದರೆ ಈ ಸಮಯ ತಾವು ಪ್ರತ್ಯಕ್ಷದಲ್ಲಿ ರಾಜಯೋಗಿ ಅರ್ಥಾತ್ ರಾಜಾ ಮಕ್ಕಳಾಗಿಬಿಡುತ್ತೀರಿ. ತಂದೆಗೂ ಸಹ ನಶೆಯಿದೆ. ಮಕ್ಕಳಿಗೂ ಸಹ ನಶೆಯಿದೆ. ಅಂದಾಗ ಸ್ವರಾಜ್ಯದ ನೀತಿ ಏನಾಯಿತು? ಸ್ವಯಂನ ಮೇಲೆ ರಾಜ್ಯ ಪ್ರತಿಯೊಂದು ಕರ್ಮೇಂದ್ರಿಯದ ಮೇಲೆ ಅಧಿಕಾರಿ. ನೋಡಲು ಇಷ್ಟವಿರಲಿಲ್ಲ ಆದರೆ ನೋಡಿಬಿಟ್ಟೆ ಎಂದು ಹೇಳುವುದು ಸರಿಯಲ್ಲ. ಕಣ್ಣು ತೆರೆದಿತ್ತಲ್ಲವೇ! ಆದ್ದರಿಂದ ಕಂಡುಬಂದಿತು. ಕಿವಿಗಳಿಗೆ ಬಾಗಿಲಿಲ್ಲವಲ್ಲವೇ ಆದ್ದರಿಂದ ಕಿವಿಯಲ್ಲಿ ಮಾತು ಬಿದ್ದುಬಿಟ್ಟಿತು. ಆದರೆ ಎರಡು ಕಿವಿಗಳಿವೆ. ಇಂತಹ ಮಾತನ್ನು ಕೇಳಿದಾಗಲೂ ಅದನ್ನು ಹೊರ ಹಾಕಲೂ ಸಹ ದಾರಿಯಿದೆ. ಆದ್ದರಿಂದ ಈ ಭಾರತದಲ್ಲಿಯೇ ವಿಶೇಷವಾಗಿ ಈ ಚಿತ್ರವನ್ನು ಗಾಂಧೀಜಿ ನೆನಪಾರ್ಥವಾಗಿ ಮಾಡಿದ್ದಾರೆ. ಕೆಟ್ಟದ್ದನ್ನು ನೋಡಬೇಡಿ, ಕೆಟ್ಟದ್ದನ್ನು ಕೇಳಬೇಡಿ, ಕೆಟ್ಟದನ್ನು ಹೇಳಬೇಡಿ ಎಂದು ತೋರಿಸಿದ್ದಾರೆ. ಅಲ್ಲಿ ಮೂರನ್ನು ತೋರಿಸುತ್ತಾರೆ. ತಾವು ನಾಲ್ಕನೆಯದನ್ನು ತೋರಿಸುತ್ತೀರಿ. ಕೆಟ್ಟದರ ಯೋಚನೆಯನ್ನೂ ಮಾಡಬಾರದು ಏಕೆಂದರೆ ಮೊದಲು ಯೋಚಿಸಬೇಕಾಗುತ್ತದೆ ನಂತರ ಮಾತನಾಡಬೇಕು ನಂತರ ನೋಡಬೇಕು. ಅಂದಾಗ ನಿಯಂತ್ರಣಾ ಶಕ್ತಿ, ಆಡಳಿತದ ಶಕ್ತಿಯನ್ನು ಇಟ್ಟುಕೊಳ್ಳಿ. ರಾಜಾ ಅರ್ಥಾತ್ ರೂಲಿಂಗ್ ಪವರ್, ರಾಜರಾಗಿದ್ದಾರೆ ಮತ್ತೆ ರೂಲಿಂಗ್ ಪವರ್ ಇಲ್ಲವೇ ಇಲ್ಲ ಅಂದಾಗ ಅವರನ್ನು ಯಾರು ರಾಜಾ ಎಂದು ಒಪ್ಪುತ್ತಾರೆ? ಸ್ವರಾಜ್ಯ ಅರ್ಥಾತ್ ರೂಲಿಂಗ್ ಪವರ್, ಕಂಟ್ರೋಲಿಂಗ್ ಪವರ್.

ಬಾಪ್‌ದಾದಾರವರು ಮೊದಲೂ ಸಹ ತಿಳಿಸಿದ್ದಾರೆ ಕೆಲವು ಮಕ್ಕಳು ತಿಳಿಸುವುದರಲ್ಲಿ ಬಹಳ ತೀಕ್ಷ್ಣವಾಗಿದ್ದಾರೆ. ಯಾವುದೇ ತಪ್ಪಾದಾಗ ಯಾರು ನಿಮಿತ್ತ ಪ್ರಮಾಣವಾಗಿಲ್ಲ ಅಂದಾಗ ನಾನು ಅದನ್ನು ಮಾಡಬಾರದು. ಇದು ಸತ್ಯವಲ್ಲ, ಯಥಾರ್ಥವಲ್ಲ, ಅಯಥಾರ್ಥ. ವ್ಯರ್ಥವಾಗಿದೆ. ಆದರೆ ತಿಳಿದಿದ್ದರೂ ಸಹ ಮತ್ತೆ ಮಾಡುತ್ತೀರೆಂದರೆ ಅಥವಾ ಇರುತ್ತೀರೆಂದರೆ ಅವರಿಗೆ ಎನು ಹೇಳಲಾಗುತ್ತದೆ? ಯಾವ ಶಕ್ತಿಯ ಕೊರತೆಯಿದೆ? ನಿಯಂತ್ರಣಾ ಶಕ್ತಿಯಿಲ್ಲ - ಹೇಗೆ ಈಗಿನ ಕಾಲದಲ್ಲಿ ಕಾರನ್ನು ಹೇಗೆ ನಡೆಸುತ್ತಾರೆ ನೋಡುತ್ತಿದ್ದೀರಿ ಅಪಘಾತ ಆಗುವ ಸಂಭಾವನೆಯಿರುತ್ತದೆ. ಬ್ರೇಕ್‌ನ್ನು ಹಿಡಿಯಲು ಪ್ರಯತ್ನ ಮಾಡುತ್ತಾರೆ ಆದರೆ ಬ್ರೇಕ್ ಹಿಡಿಯಲಿಲ್ಲವೆಂದರೆ ಅವಶ್ಯವಾಗಿ ಅಪಘಾತವಾಗುತ್ತದೆ. ಬ್ರೇಕ್ ಇದೆ ಆದರೆ ಶಕ್ತಿಶಾಲಿಯಾಗಿಲ್ಲ. ಇಲ್ಲಿ ಹಾಕಿದರೆ ಅಲ್ಲಿ ಹೋಗಿ ನಿಂತರೆ ಏನಾಗುತ್ತದೆ? ಅಷ್ಟು ಸಮಯದವರೆಗೂ ವಿವಶರಾಗುತ್ತಾರಲ್ಲವೇ. ಇಷ್ಟಪಟ್ಟರೂ ಸಹ ಏನು ಮಾಡಲು ಸಾಧ್ಯವಿಲ್ಲ. ಬ್ರೇಕ್‌ನ್ನು ಹಿಡಿಯಲು ಸಾಧ್ಯವಾಗುವುದಿಲ್ಲ ಅಥವಾ ಬ್ರೇಕ್ ಶಕ್ತಿಶಾಲಿಯಾಗಿ ಇರದೆ ಇರುವ ಕಾರಣ ಹಿಡಿಯಲು ಸಾಧ್ಯವಿಲ್ಲ. ಅಂದಾಗ ಪರಿಶೀಲನೆ ಮಾಡಿಕೊಳ್ಳಿ. ಎತ್ತರದ ಬೆಟ್ಟದ ಮೇಲೆ ಹತ್ತುವಾಗ ಏನೆಂದು ಬರೆದಿರುತ್ತಾರೆ? ಬ್ರೇಕ್‌ಅನ್ನು ಪರಿಶೀಲನೆ ಮಾಡಿಕೊಳ್ಳಿ ಏಕೆಂದರೆ ಬ್ರೇಕ್ ಸುರಕ್ಷತೆಯ ಸಾಧನವಾಗಿದೆ ಅಂದಾಗ ನಿಯಂತ್ರಣಾಶಕ್ತಿ ಅಥವಾ ಬ್ರೇಕ್‌ಅನ್ನು ಹಿಡಿಯುವ ಅರ್ಥ ಇಲ್ಲಿ ಹಿಡಿದರೆ ಅಲ್ಲಿ ಹೋಗಿ ನಿಲ್ಲುವುದಲ್ಲ. ಕೆಲವರು ವ್ಯರ್ಥವನ್ನು ಕಂಟ್ರೋಲ್ ಮಾಡಲು ಬಯಸುತ್ತಾರೆ. ಇದು ತಪ್ಪು ಎಂದೂ ಸಹ ತಿಳಿಯುತ್ತಾರೆ ಆದರೆ ಆ ಸಮಯದಲ್ಲಿ ತಪ್ಪು ಸರಿಯಲ್ಲಿ ಪರಿವರ್ತನೆಯಾಗಬೇಕು. ಇದಕ್ಕೆ ನಿಯಂತ್ರಣಾ ಶಕ್ತಿಯೆಂದು ಹೇಳಲಾಗುತ್ತದೆ. ಅರ್ಧ ಗಂಟೆಕಾಲ ವ್ಯರ್ಥ ನಡೆಸಿ ಯೋಚನೆಯನ್ನೂ ಸಹ ಮಾಡುತ್ತಾ ನಂತರ ನಿಯಂತ್ರಿಸುವುದು ಎಂದಲ್ಲ. ಬಹಳ ವ್ಯರ್ಥವನ್ನು ನಡೆಸಿ ಅರ್ಧ ಗಂಟೆಯ ನಂತರ ಪರಿವರ್ತನೆಯಾದರೆ ಅದಕ್ಕೆ ಕಂಟ್ರೋಲಿಂಗ್ ಪವರ್, ರೋಲಿಂಗ್‌ಪವರ್ ಎಂದು ಹೇಳಲು ಸಾಧ್ಯವಿಲ್ಲ. ಇದರಲ್ಲಿ ಸ್ವಲ್ಪ-ಸ್ವಲ್ಪ ಆಧೀನ ಮತ್ತು ಸ್ವಲ್ಪ-ಸ್ವಲ್ಪ ಅಧಿಕಾರ ಎರಡೂ ಸೇರಿರುತ್ತದೆ. ಅವರಿಗೆ ರಾಜ್ಯಾಧಿಕಾರಿಯೆಂದು ಹೇಳುವುದೋ ಅಥವಾ ಪುರುಷಾರ್ಥಿ ಎಂದು ಹೇಳುವುದೋ? ಈಗ ಪುರುಷಾರ್ಥಿಗಳು ರಾಜ್ಯಾಧಿಕಾರಿಗಳಾಗಿ. ಈ ಸ್ವರಾಜ್ಯಾಧಿಕಾರದಲ್ಲಿ ಶ್ರೇಷ್ಠ ಆನಂದವಿದೆ.

ಸ್ವರಾಜ್ಯಾಧಿಕಾರಿ ಅರ್ಥಾತ್ ಸದಾ ಆನಂದದಲ್ಲಿರುತ್ತಾರೆ. ಆನಂದದಲ್ಲಿ ಇರುವವರು ಎಂದೂ ಯಾವುದೇ ಮಾತಿನಲ್ಲಿ ತಬ್ಬಿಬ್ಬಾಗುವುದಿಲ್ಲ. ಒಂದುವೇಳೆ ಗೊಂದಲದಲ್ಲಿ ಬಂದರೆ ಆನಂದವಿರುವುದಿಲ್ಲ. ಸಂಗಮಯುಗದಲ್ಲಿ ಆನಂದವೇ ಆನಂದವಿದೆಯಲ್ಲವೇ. ಅಥವಾ ಆಗಾಗ ಖುಷಿಯಿರುತ್ತದೋ? ಶಕ್ತಿಯರಿಗೆ ಅಥವಾ ಪಾಂಡವರಿಗೆ ಖುಷಿಯಿದೆಯಲ್ಲವೇ? ತಿಳಿಯಿತೇ, ಸ್ವರಾಜ್ಯಾಧಿಕಾರಿಯ ನೀತಿ ಏನು ಮತ್ತು ವಿಶ್ವರಾಜ್ಯಾಧಿಕಾರಿಯ ನೀತಿ ಏನಾಗಿದೆ? ಪ್ರಜೆಯಾಗಿರಲಿ. ರಾಯಲ್ ಫ್ಯಾಮಿಲಿ ಆಗಿರಲಿ, ಪ್ರಜೆ ಅಲ್ಲ. ಪ್ರಜೆಯೂ ಸಹ ಪರಿವಾರವಾಗಿದೆ. ಪರಿವಾರದ ನೀತಿ - ಸತ್ಯಯುಗ, ತ್ರೇತಾದಲ್ಲಿ ರಾಜನೀತಿ ಇರುತ್ತದೆ. ರಾಜಾ ಎಂದು ಕರೆಯುತ್ತಾರೆ ಆದರೆ ರಾಜನಾಗಿದ್ದರೂ ಸಹ ಪರಮಪ್ರಿಯ ಪಿತನ ಸ್ವರೂಪನಾಗಿರುತ್ತಾರೆ. ಪರಿವಾರದ ವಿಧಿಯಿಂದ ರಾಜನೀತಿ ನಡೆಯುತ್ತದೆ. ಭಲೆ ರಾಜ್ಯದ ಕಾರೋಬಾರ್ ಬೇರೆ-ಬೇರೆಯವರ ಕೈಯಲ್ಲಿರುತ್ತದೆ ಆದರೂ ಪರಿವಾರದ ಸ್ನೇಹದ ಆಧಾರದಿಂದ ಕಾರೋಬಾರ್ ನಡೆಯುತ್ತದೆ. ರಾಜನ ಬಳಿ ಬಹಳಷ್ಟು ಸಂಪತ್ತು ಇರುತ್ತದೆ. ಧನ ಸಂಪತ್ತು ಇದ್ದು ಪ್ರಜೆಯ ಬಳಿ ಕೆಲವರಿಗೆ ತಿನ್ನಲು,

ಕುಡಿಯಲೂ ಸಹ ಇರದೆಯಿರಲು ಸಾಧ್ಯವಿಲ್ಲ. ದ್ವಾಪರ, ಕಲಿಯುಗದ ರಾಜನೀತಿಯಲ್ಲಿ ಲಾ ಅಂಡ್ ಆರ್ಡರ್ ನಡೆಯುತ್ತದೆ. ಆದರೆ ವಿಶ್ವರಾಜ್ಯ, ದೇವರಾಜ್ಯದ ಸಮಯದಲ್ಲಿ ಲಾ (ಕಾನೂನ್) ಇರುವುದಿಲ್ಲ ಸ್ನೇಹ ಮತ್ತು ಸಂಬಂಧದ ನೀತಿ ನಡೆಯುತ್ತದೆ. ಯಾವುದೇ ಆತ್ಮನಿಗೆ ದುಃಖ ಎಂಬ ಶಬ್ದವೂ ಸಹ ತಿಳಿದಿರುವುದಿಲ್ಲ. ರಾಜನಾಗಿರಲಿ, ಪ್ರಜೆಯಾಗಿರಲಿ ಆದರೆ ದುಃಖ-ಅಶಾಂತಿಯ ನಾಮರೂಪಗಳು ಇರುವುದಿಲ್ಲ. ದುಃಖ ಎಂತಹ ವಸ್ತುವಾಗಿದೆ ಎಂದು ಯಾರಿಗೂ ತಿಳಿದಿರುವುದಿಲ್ಲ. ಅದರ ಜ್ಞಾನವಿರುವುದಿಲ್ಲ. ಹೇಗೆ ಈ ಸಮಯ ಸ್ವರಾಜ್ಯದ ಸಮಯ, ಈ ಸಮಯದಲ್ಲಿ ತಮ್ಮನ್ನು ಬಾಪ್‌ದಾದಾ ಯಾವ ನೀತಿಯಿಂದ ನಡೆಸುತ್ತಾರೆ? ಸ್ನೇಹ ಮತ್ತು ಶ್ರೀಮತ, ಶ್ರೀಮತದಂತೆ ನಡೆಯುತ್ತಿದ್ದರೆ ಯಾವುದೇ ಆದೇಶವನ್ನು ಖಂಡಿಸುವ ಆವಶ್ಯಕತೆ ಇರುವುದಿಲ್ಲ. ಒಂದುವೇಳೆ ನೀತಿಯನ್ನು ಮರೆತರೆ ಸ್ವಯಂ, ತಾವೇ ತನ್ನನ್ನು ಕಲಿಯುಗದ ನೀತಿಯಂತೆ ನಡೆಸುತ್ತಾರೆ. ವಿಶ್ವದ ರಾಜ್ಯ ನೀತಿಯೂ ಸಹ ಬಹಳ ಪ್ರಿಯವಾದದ್ದು ಏಕೆಂದರೆ ಅನೇಕತೆಯಿಲ್ಲ. ಏಕರಾಜ್ಯ ಮತ್ತು ಅಪರಿಮಿತ ಖಜಾನೆಯಿರುತ್ತದೆ. ಪ್ರತಿಯೊಬ್ಬರೂ ಸಹ ಇಷ್ಟೊಂದು ಸಂಪನ್ನರಾಗಿರುತ್ತಾರೆ ಈವತ್ತಿನ ದಿನದ ದೊಡ್ಡ-ದೊಡ್ಡ ಪದಮಾಪದಮಪತಿಗಳು ಅವರಿಗಿಂತಲೂ ಹೆಚ್ಚಾಗಿರುತ್ತಾರೆ. ಅಪ್ರಾಪ್ತಿಯ ನಾಮರೂಪಗಳು ಇರುವುದಿಲ್ಲ. ಆದರೆ ಇದರ ಅಧಾರವೇನು? ಸ್ವರಾಜ್ಯ.

ಈ ಸಮಯದಲ್ಲಿ ಸಂಪನ್ನರಾಗುತ್ತೀರಿ, ಆದ್ದರಿಂದ ಪರಮಾತ್ಮ ಸಂಪತ್ತಿನ ಸಂಪನ್ನತೆ ಸತ್ಯಯುಗ. ತ್ರೇತಾದ ಅನೇಕ ಜನ್ಮ ಪ್ರಾಪ್ತಿಯಾಗುತ್ತದೆ. ಆದ್ದರಿಂದ ನಂಬರ್‌ವನ್ ರಾಜ್ಯ ಸ್ವರಾಜ್ಯ ನಂತರ ವಿಶ್ವರಾಜ್ಯ. ಮೂರನೆಯದು ದ್ವಾಪರ-ಕಲಿಯುಗದ ಬೇರೆ-ಬೇರೆ ರಾಜ್ಯಗಳರಾಜ್ಯ ಈ ರಾಜ್ಯವನ್ನಂತೂ ಚೆನ್ನಾಗಿ ತಿಳಿದುಕೊಂಡೇ ಇದ್ದೀರಿ. ವರ್ಣನೆ ಮಾಡುವ ಅವಶ್ಯಕತೆಯಿಲ್ಲ. ಸದಾ ಯಾವ ನಶೆಯಲ್ಲಿರಬೇಕು? ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಅಧಿಕಾರವಾಗಿದೆ! ಯಾವ ಜನ್ಮದ್ದು? ಬ್ರಾಹ್ಮಣ ಜನ್ಮದ್ದು. ಬ್ರಹ್ಮಾತಂದೆ ಹುಟ್ಟಿದ ತಕ್ಷಣವೇ ಸ್ವರಾಜ್ಯದ ತಿಲಕವನ್ನು ಪ್ರತಿಯೊಬ್ಬ ಬ್ರಾಹ್ಮಣ ಆತ್ಮನಿಗೆ ಇಟ್ಟಿದ್ದಾರೆ. ತಿಲಕಧಾರಿಗಳಾಗಿದ್ದೀರಲ್ಲವೇ. ಸ್ಮೃತಿಯು ತಿಲಕವಾಗಿದೆ. ತಿಲಕವೂ ಇದೆ. ಸಿಂಹಾಸನವೂ ಇದೆ ಮತ್ತೆ ಕಿರೀಟವೂ ಸಹ ಇದೆ. ಕಿರೀಟಧಾರರಲ್ಲವೇ. ವಿಶ್ವಕಲ್ಯಾಣದ ಕಿರೀಟ. ವಿಶ್ವಕಲ್ಯಾಣಕಾರಿಗಳಲ್ಲವೆ. ಪವಿತ್ರತೆಯ ಕಿರೀಟ ಮತ್ತು ವಿಶ್ವ ಕಲ್ಯಾಣದ ಕಿರೀಟ ಡಬಲ್ ಕಿರೀಟವಾಗಿದೆ. ಪವಿತ್ರತೆಯ ಕಿರೀಟ, ಬೆಳಕಿನ ಕಿರೀಟ, ವಿಶ್ವಕಲ್ಯಾಣದ ಕಿರೀಟ ಮತ್ತು ಸೇವೆಯ ಕಿರೀಟ.

**ವಿಶ್ವ ಸೇವಾಧಾರಿಗಳಾಗಿದ್ದೀರಲ್ಲವೇ. ರಾಜ್ಯದ ಸೇವಾಧಾರಿಗಳೆಂದು ತಿಳಿಯಬೇಡಿ. ನಾವು ಗುಜರಾತಿನವರು. ನಾವು ರಾಜಸ್ಥಾನದವರು. ನಾವು ದೆಹಲಿಯ ಸೇವಾಧಾರಿಗಳು ಈ ರೀತಿ ಅಲ್ಲ, ವಿಶ್ವಸೇವಾಧಾರಿ. ಎಲ್ಲೇ ಇರುತ್ತಿದ್ದರೂ ವೃತ್ತಿ ಮತ್ತು ದೃಷ್ಟಿ ಬೇಹದ್ದಿನದಾಗಿರಲಿ. ಒಂದುವೇಳೆ ವಿಶ್ವಸೇವಾಧಾರಿ ಆಗಲಿಲ್ಲವೆಂದರೆ ಸ್ವರಾಜ್ಯಾಧಿಕಾರಿಗಳೂ ಅಲ್ಲ. ವಿಶ್ವರಾಜರೂ ಅಲ್ಲ ನಂತರ ದ್ವಾಪರ, ಕಲಿಯುಗದಲ್ಲಿ ರಾಜ್ಯದ ರಾಜರಾಗಬೇಕಾಗುತ್ತದೆ. ಆದರೆ ವಿಶ್ವರಾಜ್ಯಾಧಿಕಾರಿಗಳಾಗಲು ಸದಾ ತಮ್ಮ ಕಿರೀಟ, ತಿಲಕ ಮತ್ತು ಸಿಂಹಾಸನಾಧಿಕಾರಿ, ಸದಾ ಇದೇ ಸ್ಥಿತಿಯಲ್ಲಿ ಇರಿ. ಶರೀರದೊಂದಿಗೆ ಸಿಂಹಾಸನದ ಮೇಲೆ ಕುಳಿತುಕೊಳ್ಳಬೇಡಿ ಆದರೆ ಬುದ್ಧಿಯ ಮೂಲಕ ಸ್ಮೃತಿಯ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಸ್ಥಿತಿಯಲ್ಲಿ ಸ್ಥಿತರಾಗುವುದೇ ಸಿಂಹಾಸನದ ಮೇಲೆ ಕುಳಿತುಕೊಳ್ಳುವುದು.** ಈ ರೀತಿ ಸದಾ ಕಾಲ

ಕುಳಿತುಕೊಳ್ಳಲು ಸಾಧ್ಯವಿದೆ. ಶರೀರದೊಂದಿಗೆ ಎಷ್ಟು ಸಮಯ ಕುಳಿತುಕೊಳ್ಳುತ್ತೀರಿ? ಸುಸ್ತಾಗಿಬಿಡುತ್ತೀರಲ್ಲವೇ? ಬುದ್ಧಿಯ ಮೂಲಕ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಇದೇ ಸಿಂಹಾಸನಾಧಿಕಾರಿಯಾಗುವುದಾಗಿದೆ. ಇದು ಸಹಜವಲ್ಲವೇ. ಸ್ವರಾಜ್ಯದ ನಶೆಯಲ್ಲಿ ಸದಾ ಸ್ಥಿತರಾಗಿ. ತಿಳಿಯಿತೇ, ಏನು ಮಾಡಬೇಕೆಂದು ತಿಳಿಯಿತೇ? ಪುರುಷಾರ್ಥಿ ಅಲ್ಲ ಆದರೆ ಅಧಿಕಾರಿಯಾಗುವುದು.

ಎಲ್ಲರೂ ಮಿಲನ ಮಾಡಿದ್ದೀರಲ್ಲವೇ. ಪರಮಾತ್ಮನ ಮಿಲನದ ಮೇಳವನ್ನು ಆಚರಿಸಲು ಎಲ್ಲರೂ ಓಡೋಡಿ ಬರುತ್ತೀರಿ ಅಂದಾಗ ಮಿಲನದ ಮೇಳದಲ್ಲಿ ಬಂದಿದ್ದೀರಲ್ಲವೇ. ಇದು ಮೇಳ ಅನಿಸುತ್ತದೆಯೋ ಅಥವಾ ಗುಂಪು ಅನಿಸುತ್ತದೆಯೋ ಆರಾಮಿದೆಯೇ? ಆರಾಮಾಗಿರುವುದು, ತಿನ್ನುವುದು, ನಡೆಯುವುದು ಎಲ್ಲವೂ ಆರಾಮಾಗಿದೆಯಲ್ಲವೇ. ಆದರೂ ಸಹ ಬಹಳ ಅದೃಷ್ಟವಂತರಾಗಿದ್ದೀರಿ. ಆ ಮೇಳದ ರೀತಿಯಲ್ಲಿ ನೆಲದಲ್ಲೇನೂ ಇಲ್ಲ. ಆದರೂ ಸಹ ಹಾಸಿಗೆ ಮತ್ತು ಮಂಚ ಸಿಕ್ಕಿದೆಯಲ್ಲವೇ. ಆ ಮೇಳಗಳಲ್ಲಿ ಸ್ನಾನ ಮಾಡಿದರೂ ಮಣ್ಣು, ಇರುವುದೂ ಸಹ ಮಣ್ಣಿನಲ್ಲಿ ಮತ್ತು ತಿನ್ನುವುದರಲ್ಲೂ ಸಹ ಮಣ್ಣು ಜೊತೆಯಲ್ಲಿ ಬರುತ್ತದೆ. ಇಲ್ಲಾ ಮಕ್ಕಳು ತಮ್ಮ ಮನೆಗೆ ಬರುತ್ತೀರಿ. ನಶೆಯಿಂದ ಬರುತ್ತೀರಿ. ಮಕ್ಕಳಿಗೂ ಸಂತೋಷ. ತಂದೆಗೂ ಸಂತೋಷ ಹಾಲಿನಲ್ಲಿ ಹಿಂದೆ ಕುಳಿತಿರುವವರೂ ಸಹ ಎಲ್ಲರಿಗಿಂತ ಮುಂದೆ ಇದ್ದೀರಿ ಏಕೆಂದರೆ ಬಾಪ್‌ದಾದಾರವರ ದೃಷ್ಟಿ ಮೊದಲು ಕೊನೆಯ ತನಕ ಹೋಗುತ್ತದೆ.

**ಸರ್ವ ಸ್ವರಾಜ್ಯಾಧಿಕಾರಿ, ನಿಶ್ಚಿಂತ ಚಕ್ರವರ್ತಿ ಮಕ್ಕಳಿಗೆ, ಸರ್ವರ ವಿಶ್ವರಾಜ್ಯಾಧಿಕಾರಿ, ಅನೇಕ ಜನ್ಮ ಸಂಪೂರ್ಣ, ಸಂಪನ್ನರಾಗಿರುವಂತಹ ಆತ್ಮರಿಗೆ, ಸದಾ ತಿಲಕ, ಕಿರೀಟ ಮತ್ತು ಸಿಂಹಾಸನಾಧಿಕಾರಿಗಳಾದ ಅಧಿಕಾರಿ ಮಕ್ಕಳಿಗೆ, ಸದಾ ಬೇಹದಿನ ಸೇವೆಯಲ್ಲಿ ಒಲವು-ಉತ್ಸಾಹದ ಇರುವಂತಹ ವಿಶೇಷ ಮಕ್ಕಳಿಗೆ, ದೇಶ-ವಿದೇಶದಲ್ಲಿ ಸನ್ಮುಖ ಅನುಭವ ಮಾಡುವಂತಹ ಮಕ್ಕಳಿಗೆ, ಬಾಪ್‌ದಾದಾರವರ ಪದಮಾಗುಣ ಪ್ರಿಯಸ್ಮೃತಿ ಹಾಗೂ ಜೊತೆ-ಜೊತೆಯಲ್ಲಿ ಸರ್ವರ ಸ್ನೇಹಕ್ಕೆ ಪಾತ್ರರಾದಂತಹವರಿಗೂ ಪ್ರತಿಯುತ್ತರ ನೀಡುತ್ತಿದ್ದೇವೆ. ದೇಶ-ವಿದೇಶದವರು ತಮ್ಮ-ತಮ್ಮ ವಿಧಿಯ ಪ್ರಮಾಣ ಸ್ವಯಂನ ಪುರುಷಾರ್ಥದಲ್ಲಿ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದಾರೆ ಮತ್ತು ಸೇವೆಯಲ್ಲೂ ಸಹ ಸದಾ ಮುಂದುವರೆಯುವಂತಹ ಉತ್ಸಾಹದಲ್ಲಿ ತೊಡಗಿದ್ದಾರೆ. ಆದ್ದರಿಂದ ಪ್ರತಿಯೊಬ್ಬರಿಗೂ ಯಾವುದೇ ಮೂಲೆಯಲ್ಲಿ ಇರುವಂತಹವರಾಗಿರಲಿ ಅವರ ನೆನಪು, ಸೇವಾ ಸಮಾಚಾರ ಪ್ರೀತಿಗೆ ಪಾತ್ರರು, ಸ್ಥಿತಿಯ ಒಲವು-ಉತ್ಸಾಹದ ಸಮಾಚಾರ ಎಲ್ಲವೂ ಪ್ರಾಪ್ತಿಯಾಗಿದೆ ಮತ್ತು ಬಾಪ್‌ದಾದಾ ಎಲ್ಲಾ ಮಕ್ಕಳಿಗೆ ಬಹಳ-ಬಹಳ ಹೆಸರು ಸಹಿತ, ಪ್ರತಿಯೊಬ್ಬರ ವಿಶೇಷತೆಯ ಸಹಿತ ನೆನಪು-ಪ್ರೀತಿಯನ್ನು ನೀಡುತ್ತಿದ್ದೇವೆ ಮತ್ತು ಸದಾ ಇದೇ ನೆನಪು, ಪ್ರೀತಿಯಿಂದ ಪಾಲನೆ ಯನ್ನು ಪಡೆಯುತ್ತಿದ್ದೀರಿ, ಹಾರುತ್ತಿದ್ದೀರಿ ಮತ್ತು ಹಾರುತ್ತಾ -ಹಾರುತ್ತಾ ಗುರಿಯವರೆಗೂ ತಲುಪಲೇ ಬೇಕಾಗಿದೆ ಅಥವಾ ತಲುಪೇಬಿಟ್ಟೆನೆಂದು ಹೇಳಬಹುದು. ಅಂದಾಗ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್12-11-1992

***ಭವಿಷ್ಯ ರಾಜ್ಯದ ಆಧಾರ - ಸಂಗಮ ಯುಗದ ಸ್ವರಾಜ್ಯ***

ಸಂಗಮ ಯುಗದ ರಾಜನೀತಿ ಅರ್ಥಾತ್ ಪ್ರತಿಯೊಬ್ಬ ಬ್ರಾಹ್ಮಣತ್ಮ ಸ್ವಯಂನ ರಾಜ್ಯಾಧಿಕಾರಿ ಆಗುತ್ತಾರೆ. ರಾಜಯೋಗಿ ಅರ್ಥಾತ್ ರಾಜರಾಗುವ ಯೋಗಿಗಳು. ಹೇಗೆ ರಾಜನು ತನ್ನ ಸೇವೆಯ ಜೊತೆಗಾರರು, ಪ್ರಜೆಗಳನ್ನು ಆದೇಶದ ಪ್ರಮಾಣ, ರಾಜನೀತಿಯ ಪ್ರಮಾಣ ನಡೆಸುತ್ತಾರೆಯೋ ಅದೇ ನೀತಿಯ ಪ್ರಮಾಣ ಜೊತೆಗಾರರು ಮತ್ತು ಪ್ರಜೆಗಳು ಕಾರ್ಯವನ್ನು ಮಾಡುತ್ತಾರೆ. ಅದೇ ರೀತಿಯಾಗಿ ಸ್ವರಾಜ್ಯ ಅಧಿಕಾರಿ ಆತ್ಮರಾದ ನೀವು ನಿಮ್ಮ ಯೋಗ ಶಕ್ತಿಯಿಂದ ಪ್ರತಿಯೊಂದು ಕರ್ಮೇಂದ್ರಿಯವನ್ನು ಹೇಗೆ ಆಜ್ಞಾಪಿಸಿದರೆ ಆ ಆದೇಶದ ಪ್ರಕಾರ ನಿಮ್ಮ ಕರ್ಮೇಂದ್ರಿಯಗಳು ನಡೆಯುತ್ತವೆ. ಕೇವಲ ಸ್ಥೂಲ ಶರೀರದ ಕರ್ಮೇಂದ್ರಿಯಗಳೇ ಅಲ್ಲ, ಮನಸ್ಸು, ಬುದ್ಧಿ, ಸಂಸ್ಕಾರವೂ ಸಹ ಆದೇಶದ ಪ್ರಮಾಣ ನಡೆಯುತ್ತವೆ. ರಾಜ್ಯಾಧಿಕಾರಿಗಳು ಸಂಸ್ಕಾರಕ್ಕೆ ವಶವಾಗುವುದಲ್ಲ ಆದರೆ ಸಂಸ್ಕಾರವನ್ನು ತಮ್ಮ ವಶದಲ್ಲಿ ತಂದು ಶ್ರೇಷ್ಠ ನೀತಿಯಿಂದ ಕಾರ್ಯದಲ್ಲಿ ತೊಡಗಿಸುತ್ತಾರೆ. ಈ ಸಮಯದ ಸ್ವರಾಜ್ಯಾಧಿಕಾರವೇ ಭವಿಷ್ಯದ ವಿಶ್ವರಾಜ್ಯಾಧಿಕಾರಕ್ಕೆ ಆಧಾರ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವರ್ತಮಾನ ಸಂಗಮ ಯುಗದಲ್ಲಿ ಸ್ವರಾಜ್ಯಾಧಿಕಾರಿ ಮತ್ತು ಭವಿಷ್ಯದಲ್ಲಿ ವಿಶ್ವರಾಜ್ಯಾಧಿಕಾರಿ.

2. ಸ್ವರಾಜ್ಯಾಧಿಕಾರಿಯಾದ ನಾನು ನನ್ನ ಯೋಗಶಕ್ತಿಯಿಂದ ಸ್ಥೂಲ, ಸೂಕ್ಷ್ಮ ಕರ್ಮೇಂದ್ರಿಯಗಳನ್ನು ರಾಜ್ಯಾಧಿಕಾರಿಯಾದ ನನ್ನ ಆದೇಶದ ಪ್ರಕಾರ ನಡೆಸುತ್ತಿದ್ದೇನೆ. (ಇದೇ ಸ್ವರಾಜ್ಯ ನೀತಿ)

3. ರಾಜಾಧಿಕಾರಿಯಾದ ನನಗೆ ಸ್ವಪ್ನದಲ್ಲಿ ಕೂಡ ಯಾವ ಕರ್ಮೇಂದ್ರಿಯವು ಮೋಸ ಮಾಡಲಾಗುವುದಿಲ್ಲ. ನಾನು ಅಧಿಕಾರಿ ಆತ್ಮ.

4. ನಾನು ನಿಶ್ಚಿಂತಾ ಚಕ್ರವರ್ತಿ ಮತ್ತು ನಿಶ್ಚಿಂತಪುರಿಯ ರಾಜ್ಯಾಧಿಕಾರಿ.

5. ನಾನು ಅಕಾಲ ಸಿಂಹಾಸನಾಧಿಕಾರಿ.

6. ನಾನು ರಾಜನ ಮಗುವಾಗಿದ್ದೇನೆ ಎಂಬ ನಶೆಯಲ್ಲಿ ಇದ್ದೇನೆ.

7. ನಾನು ಕಂಟ್ರೋಲಿಂಗ್ ಪವರ್ (ನಿಯಂತ್ರಣಾ ಶಕ್ತಿ) ಮತ್ತು ರೂಲಿಂಗ್ ಪವರ್(ಪರಿಪಾಲಿಸುವ ಶಕ್ತಿ)ಯ ಸ್ವರೂಪ. (ಇದನ್ನೇ ಸ್ವರಾಜ್ಯ ಎಂದು ಕರೆಯುತ್ತಾರೆ)

8. ಸತ್ಯತ್ರೇತಾ ಯುಗಗಳಲ್ಲಿ ನನ್ನ ರಾಜ್ಯಾಧಿಕಾರ ಪರಿವಾರದ ವಿಧಿಯಿಂದ ನಡೆಯುತ್ತಿದೆ. (ಇದೇ ವಿಶ್ವ ರಾಜ್ಯದ ನೀತಿ)

9. ನಾನು "ಸ್ವರಾಜ್ಯ ನನ್ನ ಜನ್ಮಸಿದ್ಧ ಅಧಿಕಾರ" ಎಂಬ ನಶೆಯಲ್ಲಿ ಇದ್ದೇನೆ.

10. ನಾನು ಸ್ಮೃತಿ ತಿಲಕವನ್ನು ಧರಿಸಿ, ವಿಶ್ವಕಲ್ಯಾಣಕಾರಿ ಎಂಬ ಜವಾಬ್ದಾರಿ ಕಿರೀಟವನ್ನು ಧರಿಸಿ ಸಿಂಹಾಸನದ ಮೇಲೆ ಸದಾ ಸ್ಥಿತವಾಗಿರುವ ವಿಶ್ವಕಲ್ಯಾಣಕಾರಿ.